## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.

## MVC. No. 122 /2018

**ಸಾಕ್ಷಿಯನ್ನು ದಿಃ 08.07.2025 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

ಹೆಸರು ಡಾ. ಮಹೇಶ್.ಎ.ಪಿ ಆರ್.ಡಬ್ಲ್ಯೂ 1

ತಂದೆಯ ಹೆಸರು ಪರಮೇಶ್ವರಯ್ಯ

ವಯಸ್ಸು 56 ವರ್ಷ

ಕೆಲಸ ವೈದ್ಯಾಧಿಕಾರಿ, ಸಾರ್ವಜನಿಕ ಆಸ್ಪತ್ರೆ ನಂಜನಗೂಡು

ವಾಸಸ್ಥಳ ನಂಜನಗೂಡು

ಮುಖ್ಯ ವಿಚಾರಣೆಃ 3ನೇ ಎದುರುದಾರರ ಪರ ಶ್ರೀ ಸಿವಿಎಸ್ ವಕೀಲರಿಂದಃ-

ನಾನು 2007 ರಿಂದ 2017ರವರೆಗೆ ಸಾರ್ವಜನಿಕ ಸರ್ಕಾರಿ ಆಸ್ಪತ್ರೆ ಹುಣಸೂರಿನಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 29.02.2016 ರಂದು ನಾನು ಕರ್ತವ್ಯದಲ್ಲಿದ್ದಾಗ ಈ ಕೇಸಿನ ಅರ್ಜಿದಾರರು ಸಂಜೆ 7.40 ಕ್ಕೆ ನನ್ನ ಮುಂದೆ ಅಪಘಾತಕ್ಕೆ ಒಳಗಾದ ಹಿನ್ನೆಲೆಯಲ್ಲಿ ಹಾಜರಾಗಿದ್ದರು. ಅದೇ ದಿನ ಸಂಜೆ 7.20ಕ್ಕೆ ತಾನು ನಲ್ಲೂರು ಗ್ರಾಮದ ಹತ್ತಿರ ಬೈಕಿನಲ್ಲಿ ಹೋಗುತ್ತಿದ್ದಾಗ ಇಂಡಿಕಾ ಕಾರು ಬಂದು ಡಿಕ್ಕಿಯಾಗಿ ತನಗೆ ಗಾಯಗಳಾಗಿವೆ ಎಂದು ಅರ್ಜಿದಾರರು ತಿಳಿಸಿದರು. ಅವರನ್ನು ವೈದ್ಯಕೀಯ ತಪಾಸಣೆಗೆ ಒಳಪಡಿಸಿದಾಗ, ಬಲಮೊಣಕೈನ ಮೂಳೆ ಊತಗೊಂಡಿತ್ತು. ಸದರಿ ಗಾಯವು ತುಂಬಾ ನೋವಿನಿಂದ ಕೂಡಿತ್ತು, ಅವರಿಗೆ ಪ್ರಥಮ ಚಿಕಿತ್ಸೆ ಕೊಟ್ಟು ಮೈಸೂರಿನ ಕೆ.ಆರ್ ಆಸ್ಪತ್ರೆಗೆ ಮುಂದಿನ ಚಿಕಿತ್ಸೆಗಾಗಿ ಕಳುಹಿಸಿಕೊಟ್ಟೆ ನಂತರ ಕೆ.ಆರ್ ಆಸ್ಪತ್ರೆಯಿಂದ ಗಾಯಾಳುವಿನ ವರದಿಯನ್ನು ನಮ್ಮ ಆಸ್ಪತ್ರೆಯಲ್ಲಿ ಸ್ವೀಕರಿಸಲಾಗಿದ್ದು, ಅದರ ಪ್ರಕಾರ ಗಾಯಾಳುವಿಗೆ ಕೆ.ಆರ್ ಆಸ್ಪತ್ರೆಯಲ್ಲಿ ಎಕ್ಸ್ ರೇ ತೆಗೆದು ಪರೀಕ್ಷಿಸಲಾಗಿ, ಬಲಮೊಣಕೈನ Humerous ಮೂಳೆ ಮುರಿದಿರುವುದು ಕಂಡು ಬಂದಿತ್ತು. ಅವರಿಗೆ ಶಸ್ತ್ರ ಚಿಕಿತ್ಸೆಗೆ ಒಳಪಡಿಸಿ, ಪ್ಲೇಟ್ ಮತ್ತು ಸ್ಕ್ರೂ ಅಳವಡಿಸಲಾಗಿತ್ತು. ನನ್ನ ಅಭಿಪ್ರಾಯದಲ್ಲಿ ಸದರಿ ಗಾಯವು ತೀವ್ರ

ಸ್ವರೂಪದ ಗಾಯವಾಗಿತ್ತು. ನಿಪಿ–12ರ ಗಾಯದ ಪ್ರಮಾಣ ಪತ್ರವನ್ನು ನಾನು ನೀಡಿದ್ದೇನೆ.

ಅರ್ಜಿದಾರರು ನನ್ನ ಮುಂದೆ ಚಿಕಿತ್ಸೆಗೆ ಹಾಜರಾದಾಗ ಸಾಮಾನ್ಯ ಸ್ಥಿತಿಯಲ್ಲಿ ಇದ್ದರು. ಅರ್ಜಿದಾರರು ಸ್ವತಃ ನನಗೆ ಮಾಹಿತಿಯನ್ನು ನೀಡಿದ್ದರು.

**ಪಾಟೀಸವಾಲುಃ ಅರ್ಜಿದಾರರ ಪರ ಬಿ.ಎ.ಎಸ್ ವಕೀಲರಿಂದ**

ಅರ್ಜಿದಾರರು ಹಾಗೂ ಅವರ ವಕೀಲರನ್ನು ಕರೆಯಲಾಯಿತು. ಗೈರು ಹಾಜರಿ. ಆದ್ದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ ಇಲ್ಲ**.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.

ಕಾಲಾವಕಾಶ ಕೋರಿದ್ದು, ಈಗಾಗಲೇ ಸಾಕಷ್ಟು ಕಾಲಾವಕಾಶ ನೀಡಿದ್ದು, ಸೂಕ್ತ ಕಾರಣಗಳನ್ನು ನೀಡದೇ ಇರುವುದರಿಂದ ಕೋರಿಕೆಯನ್ನು ತಳ್ಳಿಹಾಕಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಪಾಟೀಸವಾಲು:** **ಎದುರುದಾರರು ಮತ್ತು ಅವರ ಪರ ವಕೀಲರು ಗೈರು ಹಾಜರಾಗಿರುತ್ತಾರೆ. ಆದ್ದರಿಂದ ಪಾಟೀಸವಾಲಿಗಾಗಿ ಮುಂದೂಡಲಾಯಿತು.**

**ಪಾಟೀಸವಾಲು:** **ಪ್ರತಿವಾದಿಗಳು ಮತ್ತು ಅವರ ಪರ ವಕೀಲರು ಗೈರು ಹಾಜರಾಗಿರುತ್ತಾರೆ. ಆದ್ದರಿಂದ ಪಾಟೀಸವಾಲಿಗಾಗಿ ಮುಂದೂಡಲಾಯಿತು.**

ಮುಂದುವರಿದ ಮುಖ್ಯ ವಿಚಾರಣೆಗಾಗಿ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಜೈಬುನ್ನೀಸಾ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.